

ಹನುಮಪ್ಪ, ನೀರು ಬಿಡುವ ರಾಮಪ್ಪ, ಅಗಸರ ಕೆಂಚವ್ವ ಹೀಗೆ ಎಲ್ಲರೂ ಎಲ್ಲರಿಗೂ ಗೊತ್ತಿರುವವರೇ. ಎಷ್ಟೋ ವರ್ಷಗಳವರೆಗೆ ಅವರು ಅದೇ ವೃತ್ತಿಯಲ್ಲಿರುತ್ತಿದ್ದರು. ಭಿಕ್ಷುಕರು, ಜೋಗಮ್ಮಗಳೂ ಅವರವರೇ. ಹಾಗಾಗಿ ಅವರನ್ನು ಮರೆಯುವುದು ಸುಲಭವಲ್ಲ.

ಈಗ ಕೇಳಿದರೂ ಅವರ ಹೆಸರು ಅಚ್ಚೆ ಹಾಕಿಸಿದಷ್ಟು ಚೆನ್ನಾಗಿ ಜ್ಞಾಪಕವಿದೆ. ಈಗಿನ ಮಕ್ಕಳಿಗೆ ಪೇಪರ್ರು, ಹಾಲು, ಕರೆಂಟ್‌ಬಿಲ್, ನೀರು ಇವೆಲ್ಲ ಹೇಗೆ, ಯಾವಾಗ ಬರುತ್ತದೆ, ಯಾರು ತಂದುಕೊಡುತ್ತಾರೆ, ಏನೆಂದರೆ ಏನೂ ತಿಳಿದಿರುವುದಿಲ್ಲ. ಜೊತೆಗೆ ವಾರಕ್ಕೊಮ್ಮೆ ಹದಿನೈದು ದಿನಕ್ಕೊಮ್ಮೆ ಅವರು ಬದಲಾಗುತ್ತಿರುತ್ತಾರಾದ್ದರಿಂದ ಬೇರೆಯವರಿಗೂ ತಿಳಿಯುವ ಸಂಭವವಿರುವುದಿಲ್ಲ.

ಹಾಗಾಗಿ ಈಗಿನ ಕಾಲದಲ್ಲಿ 'ಯಾರೋ ಬಂದ್ರು' ಎನ್ನುವ ಸಂಭಾಷಣೆ ಕಿವಿಗೆ ಬೀಳುವುದೇ ಅಪರೂಪ. ಈಗಿನ ಕಾಲದಲ್ಲಿ ಮನೆಗಳು ದೊಡ್ಡವಿರುತ್ತವೆಯೇ ಹೊರತು, ವಾಸಿಸಲು ಅದರಲ್ಲಿ ಜನಗಳೇ ಕಡಿಮೆ. ಕುಟುಂಬದವರಿಗಿಂತ ಕೆಲಸದವರ ಸಂಖ್ಯೆಯೇ ಹೆಚ್ಚಿರುತ್ತದೆ. ಯಾರೂ ಕೂಡ ಫೋನು, ಮೆಸೇಜು ಮಾಡದೆ ಒಬ್ಬರ ಮನೆಗೆ ಕಾಲಿಡುವುದು ಸಾಧ್ಯವೇ ಇಲ್ಲ. ಅತಿಥಿಗಳ ಮಾತಿರಲಿ, ಕೊರಿಯರ್, ಸ್ವಿಗ್ಗಿ, ಜೊಮ್ಯಾಟೊ, ಗ್ಯಾಸ್ ಸಿಲಿಂಡರ್‌ನವರು ಎಲ್ಲರ ಆಗಮನದ ಸೂಚನೆಯೂ ಮೊದಲೇ ಗೊತ್ತಿರುತ್ತದೆ. ಅದರಲ್ಲಿ ಕುತೂಹಲವಾಗಲಿ ಮತ್ತೊಂದಾಗಲಿ ಇರುವುದಿಲ್ಲ. ಬಂದವರನ್ನು ಎರಡು ದಿನ ಸಾಕಿ ಸಾಗಾಕುವ ಹೊತ್ತಿಗೆ ಆತಿಥೇಯರು ಸುಸ್ತಾಗಿ ಹೋಗಿರುತ್ತಾರೆ. ಅತಿಥಿಗಳನ್ನು ಮನೆಯಲ್ಲಿನ ದೊಡ್ಡವರೇ ಮಾತನಾಡಿಸಬೇಕೇ ಹೊರತು, ಮನೆಯ ಮಕ್ಕಳು ಬಲವಂತದ ನಗೆ ತಂದುಕೊಂಡು 'ಹಾಯ್' ಹೇಳಿ ರೂಮು ಸೇರಿ, ಬಂದವರಿಗೂ ತಮಗೂ ಸಂಬಂಧವಿಲ್ಲದಂತೆ ಇದ್ದುಬಿಡುವುದೇ ಹೆಚ್ಚು. ಅವರೊಂದಿಗೆ ಬೆರೆಯುವುದಂತೂ ದೂರದ ಮಾತು. ಯಾವಾಗ ವಾಪಾಸು ಹೋಗ್ತಾರೋ ಅಂತಾ ಕಣ್ಕಣ್ಣು ಬಿಡುತ್ತಿರುತ್ತಾರೆ. ಆಗಿನ ಕಾಲದ ಹಾಗೆ ದಿಢೀರ್ ಎಂದು ಅತಿಥಿಗಳು ಪ್ರತ್ಯಕ್ಷ ಆಗುವುದೂ, ಬಂದವರು ಹೆಚ್ಚು ದಿನ ಉಳಿಯುವುದೂ ಎರಡೂ ಕಡಿಮೆ. ಬಲವಂತ ಮಾಡುವವರು ಮೊದಲೇ ಇಲ್ಲ. ಬರುವವರೂ ಮೊದಲೇ ಬರುವ ದಿನ, ಸಮಯ, ಊಟ, ತಿಂಡಿ, ಉಳಿದುಕೊಳ್ಳುವುದರ ಬಗ್ಗೆ, ಮಾಡಬೇಕಾದ ಕೆಲಸಗಳು, ಹೀಗೆ ಎಲ್ಲದರ ವೇಳಾಪಟ್ಟಿಯನ್ನೂ ತಯಾರಿಸಿಕೊಂಡೇ ಬಂದಿರುತ್ತಾರೆ. ಕೆಲವರಂತೂ ಯಾರ ಮನೆಗಳಲ್ಲೂ ಹೊಂದಾಣಿಕೆಯಾಗದೆ, ಊರಿನಲ್ಲಿರುವ ದೊಡ್ಡ ಲಕ್ಸುರಿ ಲಾಡ್ಜ್‌ಗಳಲ್ಲಿ ಉಳಿದುಕೊಂಡು, ಬಂಧುಗಳ ಮನೆಗೆ ಒಂದು ಸಾಂಪ್ರದಾಯಿಕ ಭೇಟಿ ಕೊಟ್ಟು ಹೋಗುವುದೂ ಇದೆ.

ಕಷ್ಟಸುಖ ಎಂದರೆ ಸಹಾಯಕ್ಕೆ ಓಡಿ ಬರುವವರನ್ನು ನಿಧಾನವಾಗಿ ಕಳೆದುಕೊಳ್ಳುತ್ತಿದ್ದೇವೆ. ಹಣವಿದ್ದಾಗ ಎಲ್ಲರೂ ನೆಂಟರು ಎನ್ನುವ ಹಿರಿಯರ ಮಾತನ್ನು ಕಡೆಗಣಿಸಿ, ಹಣದಿಂದ ಸವಲತ್ತುಗಳನ್ನು ಕೊಂಡಂತೆ ಜನರನ್ನೂ ಕೊಳ್ಳಬಹುದು ಎನ್ನುವ ಹುಸಿ ನಂಬಿಕೆಯಲ್ಲಿ ಬಾಳುತ್ತಿದ್ದೇವೆ. ಮನುಷ್ಯ ಸಂಘಜೀವಿ. ಸಂಬಂಧಗಳ ನಡುವಿನ ಬಾಂಧವ್ಯವನ್ನು ಪ್ರೀತಿಯೆನ್ನುವ ಬಿಗಿಯಾದ ಕೊಂಡಿಯಿಂದ ಬಂಧಿಸಿದಾಗ ಮಾತ್ರ ಅವು ಬೆಳೆಯುತ್ತವೆ. ಅದರ ಅವಶ್ಯಕತೆ ಈಗ ಹಿಂದೆಂದಿಗಿಂತಲೂ ಹೆಚ್ಚಿದೆ ಎನ್ನುವುದನ್ನು ಮನಗಾಣಿದರೆ ಒಳಿತು.

**ಪ್ರತಿಕ್ರಿಯಿಸಿ: feedback@sudha.co.in**